10 ಶುಕ್ರಾಚಾರ್ಯ ಹಾಗೆಯೇ ಮಾಡಿದ. ಆಗ ವಿಷ್ಣು ಕಮಂಡಲದ ಬಾಯಿಗೆ ದರ್ಭೆಯಿಂದ ಚುಚ್ಚಿ, ಉಂಟಾಗಿದ್ದ ತಡೆಯನ್ನು ನಿವಾರಿಸಿ ನೀರು ಸುರಿಯುವಂತೆ ಮಾಡಿದ. ಅದರಿಂದ ಶುಕ್ರಾಚಾರ್ಯನ ಒಂದು ಕಣ್ಣು ಕುರುಡಾಯಿತು. ಕಮಂಡಲದಿಂದ ನೀರು ಸುರಿಯಿತು.



11 ವಾಮನನು ತ್ರಿವಿಕ್ರಮನಾಗಿ ಬೃಹದಾಕಾರ ತಾಳಿ ನಿಂತ. ಮೂರು ಲೋಕಗಳನ್ನು ಅವನು ತನ್ನ ಎರಡು ಪಾದಗಳಿಂದ ಅಳೆದ. ಮೂರನೆಯ ಪಾದವನ್ನು ಬಲಿಯ ತಲೆಯ ಮೇಲಿಟ್ಟು ಅವನನ್ನು ಅನುಗ್ರಹಿಸಿದ.

12 ಶುಕ್ರಾಚಾರ್ಯನು ಶಿವನನ್ನು ಆರಾಧಿಸಲು ಒಂದು ವಿಶೇಷವಾದ ಶಿವಲಿಂಗವನ್ನು ನಿರ್ಮಿಸಿದ.

13




14 ತ್ರಿಮೂರ್ತಿಗಳು ಶುಕ್ರಾಚಾರ್ಯನ ಬಳಿಗೆ ಬಂದರು. ಅವರೆಲ್ಲ ಅವನನ್ನು ಅನುಗ್ರಹಿಸಿದರು. ಶಿವನ ಅನುಗ್ರಹದಿಂದ ಶುಕ್ರಾಚಾರ್ಯನು ಮತ್ತೆ ಕಣ್ಣಿನ ದೃಷ್ಟಿಯನ್ನು ಪಡೆದ.

